ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಹೌದು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಕರ್ನಾಟಕ ಆಹಾರ ನಿಗಮದ ಅಂಗಡಿಗಳಲ್ಲಿನ ಅವ್ಯವಸ್ಥೆ

೪೩೪ (೪೫೬೨) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ಆಹಾರ ನಿಗಮದ ಅಂಗಡಿಗಳ ಮೂಲಕ ಕಾರ್ಡುದಾರರಿಗೆ ಆಹಾರ ವಸ್ತುಗಳನ್ನು ನಿಗದಿತವಾಗಿ ಪೂರೈಸಲಾಗುತ್ತಿದೆಯೆ ?

ಆ) ಪೂರೈಸಲಾಗುವ ಆಹಾರ ವಸ್ತುಗಳಲ್ಲಿ ತೂಕ ಮತ್ತು ಗುಣಮಟ್ಟದ ಕಳಪೆತನದ ಬಗ್ಗೆ ಸಾರ್ವಜನಿಕರ ದೂರನ್ನು ಸರ್ಕಾರ ಗಮನಿಸಿದೆಯೇ ?

ಇ) ಗಮನಿಸಿದಲ್ಲಿ ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಈ) ನಿಗಮದಲ್ಲಿ ಇರತಕ್ಕ ೩ ಮತ್ತು ೪ನೇ ದರ್ಜೆಯ ನೌಕರರಿಗೆ ಕೊಡುವ ವೇತನ ಎಷ್ಟು ?

ಉ) ನಿಗಮದ ನೌಕರರಿಗೂ (೩ ಮತ್ತು ೪ನೇ ದರ್ಜೆ) ಸರ್ಕಾರದ ಇತರ ಇಲಾಖಾ ನೌಕರರಿಗೂ ಇರುವ ವೇತನ ವ್ಯತ್ಯಾಸವೇನು ಹಾಗೂ ವ್ಯತ್ಯಾಸವಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಊ) ಬೆಂಗಳೂರು ಕಾರ್ಡುದಾರರಿಗೆ ಸರಬರಾಜು ಮಾಡಲಾಗುತ್ತಿರುವ ಅಕ್ಕಿಯು ಕಳಪೆ ದರ್ಜೆಯದಾಗಿದ್ದು ಅದಕ್ಕೆ ಪಾವತಿ ಮಾಡಲಾಗುತ್ತಿರುವ ಹಣ ಅಧಿಕವಾಗಿದ್ದು, ಅದನ್ನು ಸರಿಪಡಿಸಲು ಕ್ರಮ ಜರುಗಿಸುವರೇ ?

ಋ) ಹೊಸದಾಗಿ ಪಡಿತರ ಅಂಗಡಿಗಳನ್ನು ಮಂಜೂರು ಮಾಡುವಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳೇನು ?

ೠ) ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಂಥ ಅಂಗಡಿಗಳ ಸ್ವಾಮ್ಯವನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಬಂದಿದ್ದಲ್ಲಿ ಅದನ್ನು ಸರಿಪಡಿಸಲಾಗುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು). —

ಅ) ಹೌದು.

ಆ) ಇಂತಹ ಪ್ರಸಂಗಗಳು ಗಮನಕ್ಕೆ ಬಂದಲ್ಲಿ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ?

ಇ) ಆಹಾರ ದಾಸ್ತಾನಿನ ಗುಣಮಟ್ಟದ ಬಗ್ಗೆ ಭಾರತ ಆಹಾರ ನಿಗಮದೊಂದಿಗೆ ವ್ಯವಹರಿಸಿ ಕೇವಲ ಉತ್ತಮ ಗುಣಮಟ್ಟದ ದಾಸ್ತಾನನ್ನು ಮಾತ್ರ ಎತ್ತುವಳಿ ಮಾಡಲು ಕ್ರಮ ಕೈಗೊಳ್ಳುತ್ತಿದೆ.

ಈ) ೩ ಮತ್ತು ೪ನೇ ದರ್ಜೆಯ ನೌಕರರಿಗೆ ನೀಡುವ ವೇತನ ಶ್ರೇಣಿ ಈ ಕೆಳಕಂಡಂತಿವೆ :

೩ನೇ ದರ್ಜೆ ನೌಕರರು :	ಕಚೇರಿ ನಿರ್ವಾಹಕರು :
ರೂ. ೧೬೦೦–೪೦–೧೮೦೦–೫೦–೨೩೦೦–೭೫–೨೯೦೦–೯೦–೨೯೯೦	
ಹಿರಿಯ ಸಹಾಯಕರು :	ಶೀಘ್ರಲಿಪಿಗಾರರು :
ರೂ. ೧೧೯೦–೩೦–೧೪೦೦–೪೦–೧೫೦೦–೫೦–೨೨೦೦.	

ಕಿರಿಯ ಸಹಾಯಕರು :	ಮಾರಾಟ ಸಹಾಯಕರು :	ಬೆರಳಚ್ಚುಗಾರರು :
ರೂ. ೯೬೦–೨೦–೧೧೦೦–೩೦–೧೪೦೦–೪೦–೧೭೬೦.		

ನಾಲ್ಕನೇ ದರ್ಜೆ ನೌಕರರಿಗೆ. ಹಿರಿಯ ಚಾಲಕ :

ಹಿರಿಯ ಚಾಲಕ : ರೂ. ೧೧೯೦-೩೦-೧೪೦೦-೪೦-೧೮೦೦-೫೦-೨೨೦೦.

ಚಾಲಕ : ರೂ. ೯೬೦-೨೦-೧೧೦೦-೩೦-೧೪೦೦-೪೦-೧೮೬೦.

ಅಟೆಂಡರ್ ; ೮೧೦-೧೫-೯೦೦-೨೦-೧೧೦೦-೩೦-೧೩೧೦.

ಸೇವಕ : ೭೮೦-೧೫-೯೦೦-೨೦-೧೦೪೦.

ಈ ಮೇಲಿನ ಶ್ರೇಣಿಯಲ್ಲಿ ನಿಗದಿಪಡಿಸಿದ ಮೂಲ ವೇತನದ ಮೇಲೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶದಂತೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಮಧ್ಯಂತರ ಪರಿಹಾರ ಇತ್ಯಾದಿಗಳನ್ನು ಕೊಡಲಾಗುವುದು.

ಉ) ವ್ಯತ್ಯಾಸವಿಲ್ಲ.

ಊ) ಭಾರತ ಆಹಾರ ನಿಗಮದ ಗೋದಾಮುಗಳಿಂದ ಕೇವಲಬಳ್ಳಿ ಗುಣಮಟ್ಟದ ಆಹಾರಧಾನ್ಯಗಳನ್ನು ಮಾತ್ರ ಎತ್ತುವಳಿ ಮಾಡಲಾಗುತ್ತಿದೆ. ಇದಕ್ಕಾಗಿ ಗುಣಮಟ್ಟ ಪರೀಕ್ಷಕರನ್ನು ನೇಮಿಸಿದ್ದು ಸಂಬಂಧಪಟ್ಟ ಅಧಿಕಾರಿಗಳು ಸಹ ಉಗ್ರಾಣಗಳಿಗೆ ಭೇಟಿ ನೀಡಿ ಉತ್ತಮ ದರ್ಜೆಯ ಧಾನ್ಯವನ್ನು ಎತ್ತುವಳಿ ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಿರುತ್ತಾರೆ.

ಋ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಮಾಡುವಾಗ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ ೧೯೭೨ ರಲ್ಲಿಯ ನಿಯಮಗಳನ್ನು ಪಾಲಿಸಲಾಗುವುದು.

ಋೂ) ಇಲ್ಲ.

ವಿವಿಧ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆ ಭರ್ತಿ ವಿಚಾರ

೪೩೫ (೮೨೧) ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:—

ಅ) ೧೯೯೩-೯೪ನೇ ಜನವರಿ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಹಾಗೂ ಅನ್ಯಾಯ ನಡೆದಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ಸೇವೆಯಲ್ಲಿರುವವರಿಗೆ ಒಂದು ತಿಂಗಳಲ್ಲಿ ಮಾನಿಟರಿಂಗ್ ಸೆಟ್ ಮಾಡಿ ಸರಿಪಡಿಸುತ್ತೇವೆಂದು ಸಭೆಗೆ ಆಶ್ವಾಸನೆ ಕೊಟ್ಟಿರುವರೆ ?

ಆ) ಆ ಮೇರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಜನರನ್ನು ಭರ್ತಿ ಮಾಡಲಾಗಿದೆ ?

ಇ) ಕೆಲವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರ ಬ್ಯಾಕ್‌ಲಾಗನ್ನು ದಿನಾಂಕ ೩೧-೩-೧೯೯೪ರ ಮೇಳೆಗೆ ಭರ್ತಿ ಮಾಡಿ ಸರಿದೂಗಿಸಲು ಸರ್ಕಾರ ಈಗಾಗಲೇ ದಿನಾಂಕ ೨೨-೧೧-೧೯೯೩ ರಂದು ಆದೇಶ ಹೊರಡಿಸಿದೆ.